ಪಿ ಡಬ್ಲ್ಯೂ-1

ಸಾಕ್ಷಿಯನ್ನು ದಿಃ 30-01-2020 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು 2 ಮತ್ತು 3 ನೇ ಪ್ರತಿವಾದಿಗಳ ಪರ - ಶ್ರೀಮತಿ ಎಂ ಎಂ ವಕೀಲರಿಂದಃ

ನನ್ನ ತಾತನನ್ನು ಮೇಕೆ ಚಿಕ್ಕಣ್ಣ ಎಂದೂ, ಮೇಕೆಯರ ಚಿಕ್ಕಣ ಎಂದೂ ಕರೆಯುತ್ತಾರೆ. ನನ್ನ ತಂದೆಗೆ ದಾಸಣ್ಣ, ದಾಸಪ್ಪ, ಕರಿಯಪ್ಪರ ದಾಸಪ್ಪ ಎಂದು ಕರೆಯುತ್ತಾರೆ ಎಂದರೆ ಸರಿ. 2 ನೇ ಪ್ರತಿವಾದಿಯ ತಾಯಿಯ ಹೆಸರು ಲಿಂಗಮ್ಮ ಎಂದರೆ ಸರಿ. ದಾಸಪ್ಪ ತಂದೆ ಮೇಕೆ ಚಿಕ್ಕಣ್ಣ ಎಂದರೆ ನನ್ನ ತಂದೆ. ಸಾಕ್ಷಿಗೆ ಸರ್ವೆ ನಂ.108/1 ಪಿ2 ರ ಪಹಣಿ ಪತ್ರಿಕೆಯನ್ನು ತೋರಿಸಿ ಅದರಲ್ಲಿ ಕರಿಯಜ್ಜನವರ ದಾಸಪ್ಪ ಬಿನ್ ಮೇಕೆ ಚಿಕ್ಕಣ್ಣನ ಹೆಸರಿನಲ್ಲಿ 5 ಎಕರೆ 4 ಗುಂಟೆ ಜಮೀನು ಇರುವುದು ಕಂಡು ಬರುತ್ತದೆ ಎಂದರೆ ಸರಿ. ಸಾಕ್ಷಿದಾರರು ಅದನ್ನು ಒಪ್ಪಿದ್ದರಿಂದ ಆ ದಾಖಲೆಯನ್ನು ನಿಡಿ-1 ಎಂದು ಗುರುತಿಸಲಾಯಿತು. ಸದರಿ ಸ್ವತ್ತನ್ನು ನನ್ನ ತಂದೆ 2002 ರಲ್ಲಿ ಖರೀದಿಸಿದ್ದಾರೆ ಎಂದರೆ ಸರಿ. ನನ್ನ ತಂದೆ ಒಂದು ನಿವೇಶನವನ್ನು ಖರೀದಿಸಿ ಅದರಲ್ಲಿ ಮನೆ ಕಟ್ಟಿಸಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸರ್ಕಾರದಿಂದ ಮನೆ ಮಂಜೂರು ಆಗಿದೆ ಎಂದು ಉತ್ತರಿಸುತ್ತಾರೆ . ಆ ಮನೆಯ ಖಾತೆ ನಂಬರ್ ನನಗೆ ಗೊತ್ತಿಲ್ಲ. ನನ್ನ ತಂದೆ ಹೆಸರಿನಲ್ಲಿರುವ 5 ಎಕರೆ 4 ಗುಂಟೆ ಜಮೀನನ್ನು ಹಾಗೂ ಮನೆಯನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ.

2 ನೇ ಪ್ರತಿವಾದಿಯ ತಾಯಿ ಲಿಂಗಮ್ಮ 2016 ರಲ್ಲಿ ಮೃತಪಟ್ಟಿದ್ದಾರೆ ಎಂದರೆ ಸಾಕ್ಷಿ ಅದು ತನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಈ ದಾವೆ ಹೂಡುವಾಗ ಲಿಂಗಮ್ಮ ಬದುಕಿದ್ದರೂ ಸಹ ಅವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಹಾಗೂ 2 ನೇ ಪ್ರತಿವಾದಿ ಕಳೆದ 20-25 ವರ್ಷಗಳಿಂದ ಒಬ್ಬರಿಗೊಬ್ಬರು ಮಾತನಾಡುವುದಿಲ್ಲ ಎಂದರೆ ಸರಿ. ದಿಃ22.01.2015 ರಂದು ನಾನು ಪ್ರತಿವಾದಿಗಳ ಬಳಿ ಹೋಗಿ ವಿಭಾಗ ಮಾಡಿಕೊಡುವಂತೆ ಕೇಳಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2002 ರಲ್ಲಿ ದಾವಾಸ್ತಿಗೆ ಸಂಬಂಧಿಸಿದಂತೆ ನನ್ನ ತಂದೆ ಓಎಸ್ ನಂ.19/2002 ಎನ್ನುವ ದಾವೆಯನ್ನು ವಿಭಾಗ ಕೋರಿ ಹೂಡಿದ್ದು ಆ ದಾವೆ ವಜಾಗೊಂಡಿದೆ ಎಂದರೆ ಸರಿಯಲ್ಲ. ದಾವಾಸ್ತಿ ಈಗ ನಮ್ಮ ಪಿತ್ರಾರ್ಜಿತ ಆಸ್ತಿಯೂ ಅಲ್ಲ, ಒಟ್ಟು ಕುಟುಂಬದ ಆಸ್ತಿಯೂ ಅಲ್ಲ ಎಂದರೆ ಸರಿಯಲ್ಲ. ದಾವಾ ಸರ್ವೆ ನಂಬರಿನ ಪಶ್ಚಿಮ ಭಾಗದಲ್ಲಿರುವ 4 ಚಿಲ್ಲರೆ ಎಕರೆ ಮಾತ್ರ ನಮಗೆ ಹಕ್ಕು ಇದ್ದು ಉಳಿದ ಜಮೀನಿನಲ್ಲಿ ನಮಗೆ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಆ ದಾವಾ ಸರ್ವೆ ನಂಬರಿನ ಪೂರ್ವ ಭಾಗದ 12 ಚಿಲ್ಲರೆ ಎಕರೆ ಜಮೀನು 2 ನೇ ಪ್ರತಿವಾದಿಗೆ ಸೇರಿದ್ದು ಎಂದರೆ ಸರಿಯಲ್ಲ. ಆ ಜಮೀನಿನಲ್ಲಿ 2 ನೇ ಪ್ರತಿವಾದಿಯೇ ಸ್ವಾಧೀನಾನುಭವದಲ್ಲಿ ಇದ್ದಾರೆ ಎಂದರೆ ಸರಿಯಲ್ಲ.

ನಾವು ಪ್ರತಿವಾದಿಗಳು ಜಂಟಿಯಾಗಿ ದಾವಾಸ್ತಿಯನ್ನು ಅನುಭವಿಸುತ್ತಿದ್ದೇವೆ ಎಂದು ತೋರಿಸಲು ನಾನು ದಾಖಲೆಗಳನ್ನು ಹಾಜರು ಪಡಿಸಿದ್ದೇನೆ. ನನ್ನ ತಾತ ಹಾಗೂ ಆತನ ಸಹೋದರರು ಜಂಟಿಯಾಗಿ ದಾವಾಸ್ತಿಯನ್ನು ಅನುಭವಿಸುತ್ತಿದ್ದರು ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ದಾಖಲೆಯನ್ನು ಹಾಜರು ಪಡಿಸಿದ್ದೇನೆ. ದಾವಾ ಸ್ವತ್ತಿನಲ್ಲಿ 50 ಬೇವಿನ ಮರ, 2 ಹುಣಸೆ ಮರಗಳು ಇದ್ದು ಆ ಹುಣಸೆ ಮರದ ಫಸಲನ್ನು ನಾವೆಲ್ಲಾ ಜಂಟಿಯಾಗಿ ಅನುಭವಿಸುತ್ತಿದ್ದೇವೆ ಎಂದು ತೋರಿಸಲು ನನ್ನ ಬಳಿ ದಾಖಲೆಗಳು ಇವೆ. ಅವೆಲ್ಲವನ್ನೂ ನ್ಯಾಯಾಲಯಕ್ಕೆ ಕೊಟ್ಟಿದ್ದೇವೆ.

ಸಾಕ್ಷಿಗೆ ನಿಪಿ-1 ರ ಪಹಣಿ ಪತ್ರಿಕೆಯನ್ನುತೋರಿಸಿ ಅದರಲ್ಲಿ ಮರಗಳ ಸಂಖ್ಯೆಯನ್ನು ನಮೂದಿಸಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಹಾಗೂ 2 ನೇ ಪ್ರತಿವಾದಿ ದಾವಾಸ್ತಿಯನ್ನು ಯಾವತ್ತೂ ಜಂಟಿಯಾಗಿ ಅನುಭವಿಸಿಲ್ಲ ಎಂದರೆ ಸರಿಯಲ್ಲ. ನನ್ನ ತಾತನ ಭಾಗಕ್ಕೆ ಬಂದಿದ್ದ 4 ಚಿಲ್ಲರೆ ಎಕರೆ ಜಮೀನಿನಲ್ಲಿ ನಮಗೆ ಹಕ್ಕು ಇದ್ದು, ಸಂಪೂರ್ಣ ದಾವಾಸ್ತಿಯಲ್ಲಿ ನಮಗೆ ಹಕ್ಕು ಇಲ್ಲ ಎಂದರೆ ಸರಿಯಲ್ಲ. 2002 ರಲ್ಲಿಯೇ 2 ನೇ ಪ್ರತಿವಾದಿ ನ್ಯಾಯಾಲಯದಿಂದ ಆದೇಶ ಪಡೆದುಕೊಂಡಿದ್ದರೂ ಸಹ ಈವರೆಗೆ ಖಾತೆ ಮಾಡಿಸಿಕೊಳ್ಳಲು ನಾವು ಬಿಟ್ಟಿಲ್ಲ ಎಂದರೆ ಸರಿಯಲ್ಲ.

ಆದ್ದರಿಂದ ನನ್ನ ಮುತ್ತಾತ ಮರಣ ಹೊಂದಿದ ನಂತರ ನನ್ನ ತಾತನ ಅಣ್ಣನ ಹೆಸರಿಗೆ ಖಾತೆಯಾಗದೇ ಹಾಗೆಯೇ ಉಳಿದುಕೊಂಡಿದೆ ಎಂದರೆ ಸರಿಯಲ್ಲ. ನಾವು ಸಲ್ಲಿಸಿದ ವಂಶವೃಕ್ಷ ಸಂಪೂರ್ಣ ನೈಜತೆಯಿಂದ ಕೂಡಿಲ್ಲ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ಖಾತೆ ಮಾಡಿಸಿಕೊಳ್ಳಲು ಅರ್ಜಿ ಸಲ್ಲಿಸಿದಾಗ ನಾನು ಅಡಚಣೆ ಉಂಟುಮಾಡಿದ್ದರಿಂದ ದಾಖಲೆಗಳೆಲ್ಲವೂ ಹಾಗೆ ಉಳಿದುಕೊಂಡಿವೆ ಎಂದರೆ ಸರಿಯಲ್ಲ. 1, 3 ಹಾಗೂ 5 ನೇ ವಾದಿಗಳು ಹಾಗೂ 1 ನೇ ಪ್ರತಿವಾದಿ ಒಂದೇ ವಿಳಾಸದಲ್ಲಿ ವಾಸವಾಗಿದ್ದರೂ ಸಹ ಬೇರೆ ಬೇರೆ ವಿಳಾಸಗಳನ್ನು ತೋರಿಸಿ ಸುಳ್ಳು ದಾವೆ ಹೂಡಿದ್ದೇವೆ ಎಂದರೆ ಸರಿಯಲ್ಲ. ದಾವಾಸ್ತಿಯಲ್ಲಿ ನಮ್ಮ ಸಂಪೂರ್ಣ ಹಕ್ಕು ಇಲ್ಲದಿದ್ದರೂ ಸಹ ಸುಳ್ಳು ದಾವೆಯನ್ನು ಹೂಡಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ ಈಗ್ಗೆ 19 ವರ್ಷದ ಹಿಂದೆ ದಾವಾಸ್ತಿಯ ಬಗ್ಗೆ ನ್ಯಾಯಾಲಯದಿಂದ ತೀರ್ಪು ಬಂದಿದ್ದರೂ ಸಹ ಅದನ್ನು ಮರೆಮಾಚಿ 2 ಮತ್ತು 3 ನೇ ಪ್ರತಿವಾದಿಗಳಿಗೆ ತೊಂದರೆ ಕೊಡಲು ನನ್ನ ತಂದೆಯಾದ 1 ನೇ ಪ್ರತಿವಾದಿಯೊಂದಿಗೆ ಶಾಮೀಲಾಗಿ ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ ಹಿರಿಯೂರು.